ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ದೂರವಾಣಿ-08472-256960
ಇ-ಮೇಲ್: aeeragescom@gmail.com
eeragescom2002@gmail.com

ನಿಗಮ ಕಛೇರಿ
ಗು.ವಿ.ಸ.ಕಂ. ಕಲಬುರಗಿ.

## ಪ್ರಕಟಣೆ

ಸಂ. ಜೆಸ್ಕಾಂ/ಮು.ಅ.(ವಿ)(ಕಾ)/ಕಾ.ನಿ.ಅ(ರೆ.ಎ)/ 2019-20/ 36778 ದಿನಾಂಕ: 27 SEP 2019

"ಕೆ.ಇ.ಆರ್.ಸಿ ಇಂಧನ ವೆಚ್ಚ ಹೊಂದಾಣಿಕೆ ಶುಲ್ಕ (FAC) ಅಧಿನಿಯಮ-2013 ಮತ್ತು ಅವುಗಳ ತಿದ್ದುಪಡಿ" ಯಂತೆ ಪ್ರಸಕ್ತ ಆರ್ಥಿಕ ವರ್ಷ-20 ರ ಮೊದಲನೆಯ ತ್ರೈಮಾಸಿಕದಲ್ಲಿ ಇಂಧನ ವೆಚ್ಚದ ಹೊಂದಾಣಿಕೆ ಶುಲ್ಕದಲ್ಲಿ ಹೆಚ್ಚಳದ ಜೊತೆಗೆ ವಿದ್ಯುತ್ ಖರೀದಿ ಶುಲ್ಕದಲ್ಲಿ ಆದ ಹೆಚ್ಚಳವನ್ನು ಪರಿಗಣಿಸಿ ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ 17.09.2019ರ ಆದೇಶದಲ್ಲಿ ಗು.ವಿ.ಸ.ಕಂ.ನಿ ಯು **1 ನೇ ಅಕ್ಟೋಬರ್ 2019 ರಿಂದ 31 ನೇ** ಡಿಸೆಂಬರ್ **-2019ರ ವರೆಗೆ** ವಿದ್ಯುತ್ ಗ್ರಾಹಕರಿಗೆ ನೀಡುವ ವಿದ್ಯುತ್ ಬಿಲ್ಲಿನಲ್ಲಿ ಬಳಕೆಯಾದ ವಿದ್ಯುತ್ ಪ್ರಮಾಣಕ್ಕೆ **ಪ್ರತಿ ಯೂನಿಟ್‌ಗೆ** 17.00 (ಹದಿನೇಳು) **ಪೈಸೆಯಂತೆ** ಎಲ್ಲಾ ಜಕಾತಿಯ ಗ್ರಾಹಕರಿಂದ ವಸೂಲಿ ಮಾಡಲು ಅನುಮೋದಿಸಿದೆ.

ಅದರಂತೆ **1 ನೇ ಅಕ್ಟೋಬರ್ 2019 ರಿಂದ 31 ನೇ** ಡಿಸೆಂಬರ್ **-2019ರ** ನೀಡುವ ವಿದ್ಯುತ್ ಬಿಲ್ಲಿನಲ್ಲಿ ಗು.ವಿ.ಸ.ಕಂ.ನಿ ಯ ಎಲ್ಲಾ ಗ್ರಾಹಕರಿಂದ ಪ್ರತಿ ಯೂನಿಟ್‌ಗೆ 17.00 (ಹದಿನೇಳು) ಪೈಸೆಯಂತೆ ಇಂಧನ ವೆಚ್ಚ ಹೊಂದಾಣಿಕೆ ಶುಲ್ಕವನ್ನು ಪ್ರಸ್ತುತ ವಿದ್ಯುತ್ ದರದೊಂದಿಗೆ ವಸೂಲಾತಿ ಮಾಡಲಾಗುವುದು. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಇಂಧನ ವೆಚ್ಚ ಹೊಂದಾಣಿಕೆ ಶುಲ್ಕ ಆದೇಶದ ಪ್ರತಿಯು **ಕ.ವಿ.ನಿ.ಆ (ಕೆ.ಇ.ಆರ್.ಸಿ)** ಮತ್ತು **ಗು.ವಿ.ಸ.ಕಂ.ನಿ ಯ** ವೆಬ್‌ಸೈಟ್ www.karnataka.gov.in/kerc ಹಾಗೂ www.gescom.in ರಲ್ಲಿ ಲಭ್ಯವಿರುತ್ತದೆ.

ಮುಖ್ಯ ಅಭಿಯಂತರರು (ವಿ),
ಕಾರ್ಯಚರಣೆ, ನಿಗಮ ಕಚೇರಿ,
ಗುವಿಸಕಂನಿ, ಕಲಬುರಗಿ.